M.V.C. No.202/2023
P.W.-2

# 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ, (ಗಂಗಾವತಿ ಆಸೀನ)

**M.V.C. No.202/2023**

ಇಂದು ದಿನಾಂಕ- **01.09.2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯದ ಸಾಕ್ಷಿ ಕಟ್ಟೆಯಲ್ಲಿ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀಸವಾಲು - 1 ಮತ್ತು 2 ನೇ ಎದುರುದಾರರ ಪರ ವಕೀಲರಿಂದ-**

2. ನಾನು ಕಾರಟಗಿಯಲ್ಲಿ ವಾಸವಿದ್ದೇನೆ. ನಾನು ಸಿವಿಲ್ ಕಂಟ್ರಾಕ್ಟ್ ಕೆಲಸ ಮಾಡುತ್ತೇನೆ. ಮೃತ ಸತೀಶಕುಮಾರ್ ಹಾಗೂ ಆತನ ಸ್ನೇಹಿತ ಕಟ್ಟಾ ಸುಬ್ರಮಣ್ಯ ಎನ್ನುವವರು ಅಪಘಾತಕ್ಕೂ 2 ವರ್ಷ ಮೊದಲಿನಿಂದ ನನ್ನ ಜೊತೆ ಕೆಲಸ ಮಾಡುತ್ತಿದ್ದರು. ಅವರು ನನ್ನ ಬಳಿ ಕೆಲಸ ಮಾಡುತ್ತಿದ್ದ ಬಗ್ಗೆ ನಾನು ನಿರ್ವಹಿಸಿರುವ ರೆಜಿಸ್ಟರ್ ಗಳಲ್ಲಿ ಅವರ ಹೆಸರುಗಳು ನಮೂದು ಇದೆ. ಆ ಬಗ್ಗೆ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅಪಘಾತದ ಸಮಯದಲ್ಲಿ ನಾನು ಸಿಂಧನೂರಿನ ಕಡೆ ನನ್ನ ಕಾರಿನಲ್ಲಿ ಹೋಗುತ್ತಿದ್ದೆನು. ಆಗ ಮೃತ ಸತೀಶಕುಮಾರ್ ಹಾಗೂ ಆತನ ಸ್ನೇಹಿತ ಕಟ್ಟಾ ಸುಬ್ರಮಣ್ಯ ಎನ್ನುವವರು ಕಾರಟಗಿ ಕಡೆಯಿಂದ ಸಿಂಧನೂರು ಕಡೆಗೆ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದರು. ಅವರ ವಾಹನ ಸಂಖ್ಯೆ ನನಗೆ ನೆನಪಿಲ್ಲ. ಕಾರಣ ತುಂಬಾ ವರ್ಷಗಳಾಯಿತು. ಸದರಿ ದ್ವಿಚಕ್ರ ವಾಹನವನ್ನು ಮೃತ ಸತೀಶಕುಮಾರ್ ಎನ್ನುವವರು ಚಾಲನೆ ಮಾಡುತ್ತಿದ್ದರು. ಕಟ್ಟಾ ಸುಬ್ರಮಣ್ಯ ಎನ್ನುವವರು ಮೋಟಾರು ಸೈಕಲ್ ಹಿಂಬದಿ ಸವಾರರಾಗಿದ್ದರು. ಅಪಘಾತವನ್ನುಂಟು ಮಾಡಿದ ಬಸ್ ಸಹ ಕಾರಟಗಿ ಕಡೆಯಿಂದ ಲಿಂಗಸೂಗೂರಿಗೆ ಹೋಗುತ್ತಿತ್ತು. ಮೃತ ಸತೀಶಕುಮಾರ್ ಹಾಗೂ ಆತನ ಸ್ನೇಹಿತ ಕಟ್ಟಾ

ಸುಬ್ರಮಣ್ಯ ಎನ್ನುವವರು ಯಾವ ಕಾರಣಕ್ಕೆ ಕಾರಟಗಿ ಕಡೆಯಿಂದ ಸಿಂಧನೂರು ಕಡೆಗೆ ಹೋಗುತ್ತಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಾನು ಹೇಳಿ ಬರೆಯಿಸಿಲ್ಲ. ನನ್ನ ವಕೀಲರೇ ಬರೆದು ಹಾಕಿದ್ದಾರೆಯೇ ಎಂದರೆ ಸಾಕ್ಷಿ ನುಡಿಯುತ್ತಾರೆ, ನಾನು ಅವರಿಗೆ ಮಾಹಿತಿಯನ್ನು ಕೊಟ್ಟಿದ್ದೆನು. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಟ್ಟಾ ಸುಬ್ರಮಣ್ಣರವರು ಮೋಟಾರು ಸೈಕಲ್ ಚಾಲನೆ ಮಾಡುತ್ತಿದ್ದರು ಎಂದು ಬರೆಯಿಸಲಾಗಿದೆ ಎಂದರೆ ಸಾಕ್ಷಿ ನುಡಿಯುತ್ತಾರೆ, ಮೃತ ಸತೀಶಕುಮಾರ್ ಅವರು ಚಾಲನೆ ಮಾಡುತ್ತಿದ್ದರು. ಅಪಘಾತವು ಮೋಟಾರ್ ಸೈಕಲ್ ಸವಾರನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಮೋಟಾರು ಸೈಕಲ್ ಸವಾರ ಅದನ್ನು ಜಿಗ್ ಜಾಗ್ ರೀತಿಯಲ್ಲಿ ಚಾಲನೆ ಮಾಡಿಕೊಂಡು ಹೋಗಿ ಅಪಘಾತವನ್ನುಂಟು ಮಾಡಿದ್ದಾರೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ಸರಕಾರಿ ಬಸ್ ಚಾಲಕನ ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ. ಅಪಘಾತ ಬಸ್ ಚಾಲಕನ ತಪ್ಪಿನಿಂದ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಸತೀಶಕುಮಾರ್ ಹಾಗೂ ಆತನ ಸ್ನೇಹಿತ ಕಟ್ಟಾ ಸುಬ್ರಮಣ್ಯ ಎನ್ನುವವರು ನನ್ನ ಬಳಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಅವರ ಕುಟುಂಬದವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ದಿನ ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಿನಾಂಕ 03.10.2022 ರಂದು ಅಪಘಾತದ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ - ಇಲ್ಲ</u>.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ, ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಗಿದೆ.)

ಓ. ಹೇ. ಕೇ. ಸರಿ ಇದೆ.

(**ವೇದಮೂರ್ತಿ ಬಿ.ಎಸ್.**)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಪ್ಪಳ (ಗಂಗಾವತಿ ಪೀಠ).